ಕ್ರ.ಸಂ:ಎ3/ಎಫ್.ಸಿ/ಸಿಆರ್-40/22-23 /2023-24 | 529

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಶಿರಸಿ ವಿಭಾಗ, ಶಿರಸಿ.
ದಿನಾಂಕ: 30-05-2023
☎/🖷 : 08384-226445
✉ : dcfsirsi@gmail.com

ರಿಗೆ,

ಅರಣ್ಯ ಸಂರಕ್ಷಣಾಧಿಕಾರಿಗಳು,
ಕೆನರಾ ವೃತ್ತ, ಶಿರಸಿ.

ಮಾನ್ಯರೆ,

ವಿಷಯ: Diversion of 0.0456 ha of Forest land in F.Sy.No.7 of Gowdalli Village sirsi Taluk Uttara Kannada district for approach road to malki land Sy.no.4/3, 4/9, 5/4, 5/5 of Gowdalli Village, Sirsi Taluk, Uttara Kannda District in favour of Ramachandra Ramesh Hulekal, Sirsi.

ಉಲ್ಲೇಖ:
1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಅರಣ್ಯ ಸಂರಕ್ಷಣೆ ಮತ್ತು ನೋಡಲ್ ಅಧಿಕಾರಿಗಳು (FCA) ಬೆಂಗಳೂರು ರವರ ಪತ್ರ ಸಂಖ್ಯೆ: KFD/HoFF/A52K(GFL)/24/2022-FC dated:08-03-2023
2. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶಿರಸಿ ಇವರ ಪತ್ರ ಸಂಖ್ಯೆ: ಸ.ಅ.ಸಂ./ಶಿರಸಿ/ಎಫ್.ಸಿ/2022-23/02 ದಿನಾಂಕ:05-04-2023

-0-

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶಿರಸಿ ತಾಲೂಕಿನ ಶಿರಸಿ ವಲಯ ವ್ಯಾಪ್ತಿಯ ಗೌಡಳ್ಳಿ ಗ್ರಾಮದ ಅರಣ್ಯ ಸ ನಂ:07 ರಲ್ಲಿ ಶ್ರೀ ರಾಮಚಂದ್ರ ರಮೇಶ ಹುಲೇಕಲ್ ಸಾ॥ಗೌಡಳ್ಳಿ ಇವರು ಸಂಪರ್ಕ ರಸ್ತೆಗಾಗಿ ಅರಣ್ಯ ಜಾಗ 0.0456 ಹೆ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಲು ಅನುಮತಿ ನೀಡುವ ಬಗ್ಗೆ ಅಭಿಪ್ರಾಯವನ್ನು ನೀಡಲು ಉಲ್ಲೇಖ (1) ರನ್ವಯ ಆದೇಶಿಸಿದಂತೆ, ಉಲ್ಲೇಖಿತ ಪತ್ರ 2 ರಲ್ಲಿ ವಲಯ ಅರಣ್ಯಾಧಿಕಾರಿ ಶಿರಸಿ ರವರ ವರದಿಯಾನುಸಾರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶಿರಸಿ ರವರು ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯ ಅಂಶಗಳ ಕುರಿತು ದಿನಾಂಕ: 29-05-2023 ರಂದು ಈ ಕೆಳಸಹಿದಾರನಾದ ನಾನು, ಸದರಿ ಪ್ರಸ್ತಾಪಿತ ಸ್ಥಳವನ್ನು ಪರಿಶೀಲಿಸಿದ್ದು, ವಲಯ ಅರಣ್ಯಾಧಿಕಾರಿ ಶಿರಸಿ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶಿರಸಿ ರವರ ವರದಿ ನಿಜವಿರುತ್ತದೆ. ಗೌಡಳ್ಳಿ ಗ್ರಾಮದ ಅರಣ್ಯ ಸ ನಂ:07 ರ ಕ್ಷೇತ್ರದಲ್ಲಿ 0.0456 ಹೆ ಕ್ಷೇತ್ರವನ್ನು ರಸ್ತೆಗಾಗಿ ಬಳಸಿಕೊಳ್ಳಲು ಉಲ್ಲೇಖ (1) ರಲ್ಲಿ ಕೇಳಿರುವ ಅಂಶಗಳಿಗೆ ಈ ಕೆಳಗಿನಂತೆ ವರದಿ ಸಲ್ಲಿಸಲಾಗಿದೆ.

1. ಸದರಿ ಅರಣ್ಯ ಸಂಪರ್ಕ ರಸ್ತೆಯು ಕಚ್ಚಾ ರಸ್ತೆ ಬಂಡಿ ಜಾಡು (cart road) ರಸ್ತೆಯಾಗಿರುತ್ತದೆ. ಸದರಿ ಮಾಲ್ಕಿ ಕ್ಷೇತ್ರಕ್ಕೆ ಹೋಗಲು ಬೇರೆ ಯಾವುದೇ ಸಂಪರ್ಕ ರಸ್ತೆ ಇಲ್ಲದೇ ಇರುವುದರಿಂದ ಉಪಯೋಗಿ ಸಂಸ್ಥೆಯವರು ಪ್ರಸ್ತಾಪಿತ ರಸ್ತೆಯನ್ನು ಸಂಪರ್ಕ ರಸ್ತೆಯನ್ನಾಗಿ ಬಳಸಲು ಕೋರಿಕೊಂಡಿರುತ್ತಾರೆ. ಈ ಬಗ್ಗೆ ಸ್ಪಷ್ಟೀಕರಣ ನೀಡಿ ಈಗಾಗಲೇ ದಾಖಲೆಗಳನ್ನು & ಮುಚ್ಚಳಿಕೆ ಪತ್ರವನ್ನು ನೀಡಿರುತ್ತಾರೆ.
2. 2 ನೇ ಅಂಶದ ಬಗ್ಗೆ ಉಪಯೋಗಿ ಸಂಸ್ಥೆಯವರಿಗೆ ಸ್ಪಷ್ಟೀಕರಣ ಕೇಳಲಾಗಿ ಸದರಿಯವರು, ಮುಂದಿನ ದಿನಗಳಲ್ಲಿ ತಮ್ಮ ಮಾಲ್ಕಿ ಪ್ರದೇಶವನ್ನು (Non Agricultural Land) ಆಗಿ ಪರಿವರ್ತನೆ ಮಾಡಲು ಸರ್ಕಾರದ ಆದೇಶದಂತೆ 30 ಅಡಿ ಅಗಲದ ಸಂಪರ್ಕ ರಸ್ತೆಯ ಅವಶ್ಯಕತೆ ಇರುತ್ತದೆ. ಮತ್ತು ಸದರಿ ಪ್ರದೇಶಕ್ಕೆ ತೆರಳಲು ಯಾವುದೇ ಪರ್ಯಾಯ ರಸ್ತೆ ಇರದ ಕಾರಣ 30.40 ಮೀಟರ್ ಉದ್ದದ ರಸ್ತೆಯ ಅವಶ್ಯಕತೆ ಇರುತ್ತದೆ ಎಂಬ ಮುಚ್ಚಳಿಕೆಯನ್ನು ನೀಡಿರುತ್ತಾರೆ.
3. ಸದರಿ ಪ್ರಸ್ತಾಪಿತ ಮಾಲ್ಕಿ ಜಾಗಕ್ಕೆ ಹೋಗಲು ಬದಲಿ ರಸ್ತೆ ಮಾರ್ಗ ಯಾವುದೂ ಇರುವುದಿಲ್ಲ.

ಮೇಲ್ಕಂಡ ಅಂಶಗಳಿಗೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರ (2) ರಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶಿರಸಿ ಇವರು ಸಲ್ಲಿಸಿರುವ ದಾಖಲೆಗಳನ್ನು ಈ ಪತ್ರದೊಂದಿಗೆ ಲಗ್ತ ಇರಿಸಿ ಗೌರವಪೂರ್ವಕವಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಶಿರಸಿ ವಿಭಾಗ, ಶಿರಸಿ.

DESPATCHED
30-05-2023

DIVERSION RAMCHANDRA HULEKAL GOWDALLI

Scanned by TapScanner